**ಕಾವ್ಯಸಂಕ**



**ಆರಿಫ್ ರಾಜಾ**

ಕವಯಿತ್ರಿ, ಕಲಾ ವಿಮರ್ಶಕಿ
**ಫ್ಲಮಿನಿಯಾ ಕೊಲೆಲ್ಲಾ**
ದೇಶ: **ಇಟಲಿ**



ಕಾವ್ಯದಲ್ಲಿ ಗಂಭೀರವಾಗಿ ತೊಡಗಿಸಿಕೊಂಡಿರುವ ಫ್ಲಮಿನಿಯಾ ಕೊಲೆಲ್ಲಾ ಇಟಲಿಯ ಯುವ ಕವಯಿತ್ರಿ. 1996 ಜನವರಿ 13ರಂದು ರೋಮ್‌ನಲ್ಲಿ ಜನಿಸಿದ ಅವರು, ಕ್ಲಾಸಿಕಲ್ ಸ್ಟಡೀಸ್ ನಂತರ, 2019ರಲ್ಲಿ ಸಿವಿಲ್ ಲಾಯರ್ ಆಗಿ ಕಾನೂನು ಪದವಿ ಪಡೆದರು. 2018ರಲ್ಲಿ 'Sul Crinale'ಎಂಬ ಶೀರ್ಷಿಕೆಯ ಕವಿತಾ ಸಂಕಲನ ಹೊರತಂದಿದ್ದಾರೆ. ಇದರಲ್ಲಿನ ಬಿಡಿ ರಚನೆಗಳು ಇಂಗ್ಲಿಷ್, ಸ್ಪ್ಯಾನಿಷ್, ಫ್ರೆಂಚ್ ಮುಂತಾದ ಭಾಷೆಗಳಿಗೆ ಅನುವಾದಗೊಂಡಿವೆ. 2020ರಲ್ಲಿ ಅವರ ಗದ್ಯ ಬರಹಗಳು ಸಾಪ್ತಾಹಿಕ 'ಪನೋರಮಾ' ಸೇರಿದಂತೆ ವಿವಿಧ ಪತ್ರಿಕೆಗಳಲ್ಲಿ ಕಾಣಿಸಿಕೊಂಡವು. ಅದೇ ವರ್ಷ ಮೇ ತಿಂಗಳಲ್ಲಿ ಅವರ ಅತ್ಯಂತ ಕಲಾತ್ಮಕ ಕಾವ್ಯ ಕೃತಿ 'La voce del fuoco' ಪ್ರಕಟವಾಯಿತು. ಅಲ್ಲದೇ ಮಹಾಕವಿ ವಿಲಿಯಂ ಶೇಕ್ಸ್‌ಪಿಯರ್ ರಚಿಸಿದ 60 ಸಾನೆಟ್‌ಗಳ ಹೊಸ ಅನುವಾದ ಆವೃತ್ತಿಯನ್ನು ಅವರು ಸಂಪಾದಿಸಿ ಪ್ರಕಟಿಸಿದ್ದಾರೆ.

# ‘ಓದಿಗೆಂದೇ ನಾನು ತುಂಬಾ ತ್ಯಾಗ ಮಾಡಿದ್ದೇನೆ